<u>ಪ್ರಾಸಾ-1</u>

**<u>ಅರ್ಜಿಯಲ್ಲಿನ ಆದೇಶದ ದಿನಾಂಕಃ 29.04.2025 ರ ಮೇರೆಗೆ ಪ್ರಾಸಾ-1, ಶಾರವ್ವ ನಾಯಕ ರವರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು - 09.07.2025</u>**

**<u>ಪಾಟಿ ಸವಾಲುಃ ಶ್ರೀ ಎಸ್.ವಿ. ಗ್ರಾಮಪುರೋಹಿತ, ಆರೋಪಿ ಪರ (CLADC) ವಕೀಲರಿಂದಃ</u>**

18. ಚಾಸಾ-10 ರಿಂದ 13 ರವರು ನಮ್ಮ ತಾಂಡಾದ ಗುರು ಹಿರಿಯರು. ಚಾಸಾ-10 ರಿಂದ 13 ರವರ ಮನೆತನದವರು ನಿರಂತರವಾಗಿ ತಾಂಡಾದ ಗುರು ಹಿರಿಯರಾಗಿ ಕೆಲಸ ಮಾಡುತ್ತಾ ಬಂದಿರುತ್ತಾರೆ.

19. ಪ್ರಾಸಾ-6 ನನ್ನ ಚಿಕ್ಕಪ್ಪನ ಮಗ. ಘಟನೆ ನಡೆಯಿತು ಎನ್ನಲಾದ ದಿನ, ಪ್ರಾಸಾ-6 ರವರು ಮನೆಯಲ್ಲಿದ್ದರು. ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣಿಸುವ ಆರೋಪಿ ನಮ್ಮ ತಾಂಡಾದವನು. ಆರೋಪಿ ಗೋವಿನ ಜೋಳದ ವ್ಯಾಪಾರ ಮಾಡುತ್ತಿದ್ದನು ಎಂಬ ವಿಷಯ ನನಗೆ ಗೊತ್ತಿಲ್ಲ. ಆರೋಪಿಯ ಹೆಂಡತಿ ಹೆಸರು ಸುನೀತಾ ಮತ್ತು ಆಕೆಯನ್ನು ನಾನು ನೋಡಿದ್ದೇನೆ. ಆರೋಪಿ ಮತ್ತು ಆತನ ಹೆಂಡತಿ ಮಧ್ಯ ಸಂಬಂಧ ಸರಿ ಇಲ್ಲ ಎಂಬುದು ನನಗೆ ಗೊತ್ತಿತ್ತು. ಕಾರಣ ಆರೋಪಿಯು ತನ್ನ ಹೆಂಡತಿಗೆ ಹೊಡೆ ಬಡೆ ಮಾಡುತ್ತಿದ್ದನು. ನಾನು ಆರೋಪಿಗೆ ಮತ್ತು ಆತನ ಹೆಂಡತಿಗೆ ಸಂಸಾರ ಸರಿಯಾಗಿ ನಡೆಸಿಕೊಂಡು ಹೋಗಿ ಎಂದು ಬುದ್ದಿ ಹೇಳಿರುವುದಿಲ್ಲ, ಕಾರಣ ನಮ್ಮ ಮನೆಯಿಂದ ಆರೋಪಿಯ ಮನೆ ದೂರದಲ್ಲಿ ಇರುತ್ತದೆ. ನನ್ನ ಗಂಡ ಆರೋಪಿಗೆ ಮತ್ತು ಆತನ ಹೆಂಡತಿಗೆ ಅವರ ಸಂಸಾರದ ಬಗ್ಗೆ ಬುದ್ದಿ ಹೇಳಿರುವುದಿಲ್ಲ. ಆರೋಪಿ ಮತ್ತು ಆತನ ಹೆಂಡತಿ ಯಾವ ಕಾರಣಕ್ಕೆ ಜಗಳ ಮಾಡುತ್ತಿದ್ದರು ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು, ಜಗಳವಾಡುತ್ತಿದ್ದರು ಎಂದು ಹೇಳುತ್ತಾರೆ.

20. ಆರೋಪಿಯು ತನ್ನ ಹೆಂಡತಿಗೆ ಹೊಡೆ ಬಡೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಹೆಂಡತಿಯು ತನ್ನ ಗಂಡನ ಮನೆಯನ್ನು ಬಿಟ್ಟು, ತನ್ನ ತವರು ಮನೆಯಾದ ಚಂದಾಪುರ ಗ್ರಾಮದಲ್ಲಿಯೇ ಇದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಎಂದಿಗೂ ನನ್ನ ಗಂಡನಿಗೆ ನನ್ನ ಬಾಳ್ವೆ ಸರಿ ಮಾಡು ಎಂದು ಕೇಳಿರಲಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನನ್ನ ಗಂಡನೂ ಸಹ ಆರೋಪಿಗೆ ಯಾವತ್ತೂ ನಿಮ್ಮ ಸಂಸಾರ ಸರಿ ಮಾಡುತ್ತೇವೆ ಎಂದು ತಿಳಿಸಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಎಂದಿಗೂ ನನ್ನ ಗಂಡನ ಮೇಲೆ ದ್ವೇಷ ಸಾಧಿಸಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮನೆ ಮತ್ತು ನಮ್ಮ ಮನೆ ದೂರದಲ್ಲಿ ಇರುವುದರಿಂದ ಅವರ ಸಂಸಾರದ

ಬಗ್ಗೆ ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ.

21. ಪ್ರಾಸಾ-6 ರವರು ನನ್ನ ಹತ್ತಿರ ಬಂದು, ಆರೋಪಿಯು ನನ್ನ ಗಂಡನಿಗೆ ಚಾಕು ಹಾಕಿದ್ದಾನೆ ಎಂದು ಆ ದಿನ ರಾತ್ರಿ 08.30 ಗಂಟೆಗೆ ಬಂದು ತಿಳಿಸಿರುತ್ತಾನೆ. ಪ್ರಾಸಾ-6 ರವರು ಸೇವಾಲಾಲ ದೇವಸ್ಥಾನದ ಹತ್ತಿರ ಹೋಗಿದ್ದು, ಅಲ್ಲಿ ಘಟನೆಯನ್ನು ನೋಡಿ ಬಂದು ನನಗೆ ಹೇಳಿದನು. ಸದರಿ ವಿಷಯವನ್ನು ಪ್ರಾಸಾ-6 ರವರು ನನಗೆ ತಿಳಿಸಿದರು ಎಂದು ದೂರಿನಲ್ಲಿ ಬರೆಸಿರುತ್ತೇನೆ. ಮೇಲ್ಕಂಡ ವಿಷಯವನ್ನು ನನ್ನ ದೂರಿನಲ್ಲಿ ಬರೆಸಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

22. ನಾನು ಮತ್ತು ಪ್ರಾಸಾ-6 ರವರು ಸೇವಾಲಾಲ ದೇವಸ್ಥಾನದ ಹತ್ತಿರ ಹೋದಾಗ, ಅಲ್ಲಿ ಚಾಸಾ-10, 11, 12 ಮತ್ತು 13 ರವರು ಇದ್ದರು. ಅವರನ್ನು ಬಿಟ್ಟು ಬೇರೆ ಯಾರೂ ಸ್ಥಳದಲ್ಲಿ ಇರಲಿಲ್ಲ. ನಾನು ಘಟನಾ ಸ್ಥಳದಲ್ಲಿ ಆರೋಪಿಯನ್ನು ನೋಡಲಿಲ್ಲ. ಪ್ರಾಸಾ-11 ರವರು ನನಗೆ ಘಟನೆಯ ಬಗ್ಗೆ ಸ್ಥಳದಲ್ಲಿ ಹೇಳಿದರು. ಚಾಸಾ-10 ರಿಂದ 13 ರವರು ನನ್ನ ಸಂಬಂಧಿಕರಾಗಿದ್ದರಿಂದ, ನಾನು ಹೇಳಿದ ಪ್ರಕಾರ ಘಟನೆ ನಡೆಯದೇ ಇದ್ದರೂ ಸಹ, ಆರೋಪಿಯ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

23. ಪ್ರಾಸಾ-5 ವಾಹನದಲ್ಲಿ ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಪ್ರಾಸಾ-5 ನನ್ನ ಸಂಬಂಧಿಕರು ಎಂದರೆ ಸರಿ.

24. ದೂರು ಕೊಡುವ ಸಮಯದಲ್ಲಿ ನಾನು, ಪ್ರಾಸಾ-10, 11, ಚಾಸಾ-12 ರವರು ಇದ್ದೆವು. ಸಾಕ್ಷಿ ಮುಂದುವರೆದು, ಪೋಲೀಸರು ಅತ್ತಿಕಟ್ಟಿ ಗ್ರಾಮಕ್ಕೆ ಬಂದಿದ್ದರು ಮತ್ತು ನಾನು ಅಲ್ಲಿಯೇ ದೂರನ್ನು ಕೊಟ್ಟಿರುತ್ತೇನೆ. ದೂರನ್ನು ಪ್ರಾಸಾ-10 ರವರು ಬರೆದಿರುತ್ತಾರೆ. ದೂರನ್ನು ಎಷ್ಟು ಸಮಯದವರೆಗೆ ಬರೆದರು ಎಂದು ನನಗೆ ಗೊತ್ತಿಲ್ಲ. ಪ್ರಾಸಾ-10 ರವರು ದೂರನ್ನು ಬರೆದ ನಂತರ ನನಗೆ ಓದಿ ಹೇಳಿರುತ್ತಾರೆ. 10 ನಿಮಿಷ ದೂರನ್ನು ಓದಿ ಹೇಳಿರುತ್ತಾರೆ. ನಾನು ಎಲ್ಲಾ ಸಂಗತಿಯನ್ನು ನನ್ನ ದೂರಿನಲ್ಲಿ ಬರೆಸಿರುತ್ತೇನೆ.

25. ಪೋಲೀಸರಿಗೆ ಪ್ರಾಸಾ-10 ರವರು ಚಾಕು ಕೊಟ್ಟಾಗ, ನಾನೂ ಸಹ ಸ್ಥಳದಲ್ಲಿ ಇದ್ದೆನು. ನಾನು ಪಂಚನಾಮೆಗೆ ಸಹಿ ಮಾಡಿರುವುದಿಲ್ಲ. ಪ್ರಾಸಾ-10 ರವರು ಕೊಟ್ಟ ಚಾಕುವಿಗೂ, ಆರೋಪಿಗೂ ಮತ್ತು ಘಟನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು.ಮಾ.6 (ಚಾಕು) ನ್ನು ನಾವು ಸುಳ್ಳು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಮು.ಮಾ.6 (ಚಾಕು) ಆರೋಪಿಯ ಹತ್ತಿರ ಇತ್ತು. ಮು.ಮಾ.6 ನ್ನು ಆರೋಪಿಯಿಂದ ಪ್ರಾಸಾ-10 ರವರು ಕಸಿದುಕೊಂಡು ಪೋಲೀಸರಿಗೆ ಕೊಟ್ಟಿದ್ದನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಶುಕ್ರವಾರ ರಾತ್ರಿ ಪೋಲೀಸರಿಗೆ ಮು.ಮಾ.6 ನ್ನು ನಾವು

ಕೊಟ್ಟಿರುತ್ತೇವೆ.

26. ಮು.ಮಾ.1 ಚಾಕುವಿಗೂ ಮತ್ತು ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೋಲೀಸರು ನನ್ನನ್ನು ವಿಚಾರಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಗೋವಿನ ಜೋಳದ ವ್ಯಾಪಾರ ಮಾಡುತ್ತಿದ್ದುದರಿಂದ, ಅವನ ವ್ಯಾಪಾರ ಹಾಳಾಗಲಿ ಎಂಬ ದ್ವೇಷದಿಂದ ಆತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**

**ಪ್ರಾಸಾ-8**

**ಅರ್ಜಿಯಲ್ಲಿನ ಆದೇಶದ ದಿನಾಂಕಃ 29.04.2025 ರ ಮೇರೆಗೆ ಪ್ರಾಸಾ-8, ಪರಮೇಶ ನಾಯಕ ರವರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು - 09.07.2025**

**ಪಾಟಿ ಸವಾಲುಃ ಶ್ರೀ ಎಸ್.ವಿ. ಗ್ರಾಮಪುರೋಹಿತ, ಆರೋಪಿ ಪರ (CLADC) ವಕೀಲರಿಂದಃ**

11. ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣಿಸುವ ಆರೋಪಿ ನನಗೆ ಗೊತ್ತು ಮತ್ತು ಆತನು ರೈತಾಪಿ ಕೆಲಸ ಮಾಡುತ್ತಿದ್ದನು. ಆರೋಪಿಯು ಗೋವಿನ ಜೋಳ ಮಾರಾಟ ಮಾಡುತ್ತಿದ್ದನೋ, ಇಲ್ಲವೋ ನನಗೆ ಗೊತ್ತಿಲ್ಲ, ಕಾರಣ ನಾನು ಗೋವಾದಲ್ಲಿ ಇರುತ್ತೇನೆ ಎಂದು ಹೇಳುತ್ತಾರೆ. ಆರೋಪಿಯ ಸಂಸಾರದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇತ್ತು. ಆರೋಪಿ ಹಾಗೂ ಆತನ ಹೆಂಡತಿಯ ಮಧ್ಯ ಯಾವ ಕಾರಣಕ್ಕೆ ಜಗಳವಾಗುತ್ತಿತ್ತು ಎಂದು ನನಗೆ ಖುದ್ದಾಗಿ ಗೊತ್ತಿಲ್ಲ.

12. ಆರೋಪಿಯು ತನ್ನ ಸಂಸಾರವನ್ನು ಸರಿ ಮಾಡಿ ಎಂದು ಮೃತ ವ್ಯಕ್ತಿಯ ಹತ್ತಿರ ಬಂದು ಕೇಳಿದ್ದು ನನಗೆ ಖುದ್ದಾಗಿ ಗೊತ್ತಿಲ್ಲ. ನಾನು ಗೋವಾದಲ್ಲಿ 2 – 3 ವರ್ಷ ಇದ್ದೆನು. ಘಟನೆಯಾದಾಗ ನಾನು ಸ್ಥಳದಲ್ಲಿ ಇದ್ದೆನು. ಪೋಲೀಸರಿಗೆ ನಾನೇ ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಘಟನೆಯಾದಾಗ ಸ್ಥಳದಲ್ಲಿ ನಾನು ಇದ್ದೆನು ಎಂದು ಪೋಲೀಸರಿಗೆ ಹೇಳಿರುವುದಿಲ್ಲ. ಸಾಕ್ಷಿ ಮುಂದುವರೆದು, ಘಟನೆಯಾದಾಗ ನಾನು ಗೋವಾದಲ್ಲಿದ್ದು, ಘಟನೆಯ ಬಗ್ಗೆ ಗೊತ್ತಾಗಿ, ನಾನು ಬೆಳಿಗ್ಗೆ 05.00 ಗಂಟೆಗೆ ಊರಿಗೆ ಬಂದೆನು ಮತ್ತು ಘಟನಾ ಸ್ಥಳದಲ್ಲಿ ರಕ್ತ ಇರುವುದನ್ನು ನಾನು ನೋಡಿರುತ್ತೇನೆ. ಘಟನೆಯ ಬಗ್ಗೆ ಊರಿನ ಹಿರಿಯರು ನನಗೆ ಸ್ಥಳವನ್ನು ತೋರಿಸಿದ್ದರು. ಪಂಚನಾಮೆ ಮಾಡುವಾಗ, ಊರಿನ ಹಿರಿಯರು ಹೊರಗಡೆ ನಿಂತಿದ್ದರು. ನಿಪಿ-4 ರ ಪಂಚನಾಮೆಯಲ್ಲಿ ಫೋಟೋ ತೆಗೆದಿರುವ ಬಗ್ಗೆ ಬರೆಯಲಾಗಿದೆ. ನಿಪಿ-4 ರ ಪಂಚನಾಮೆಯನ್ನು ಬರೆದ ನಂತರ ಪೋಲೀಸರು ನನಗೆ ಓದಿ ಹೇಳಿಲ್ಲ. ನಾನು ಓದಿ ಹೇಳುವಂತೆ ಪೋಲೀಸರಿಗೆ ಕೇಳಿರುವುದಿಲ್ಲ.

13. ಘಟನಾ ಸ್ಥಳದಲ್ಲಿ ಬಿದ್ದಿದ್ದ ರಕ್ತವನ್ನು ಶೇಖರಿಸಿದ ಪೋಲೀಸರ ಹೆಸರು ನನಗೆ ಗೊತ್ತಿಲ್ಲ. ಸದರಿ ರಕ್ತವು ನಮ್ಮ ಅಣ್ಣನದೇ ಎಂದು ಪೋಲೀಸರು ನನಗೆ ತಿಳಿಸಿರುತ್ತಾರೆ. ಪಂಚನಾಮೆ ಮಾಡುವ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಂಡಾದ ಹಿರಿಯರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**